# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.192 /2022

P.W: 9
C.W:18

**ದಿನಾಂಕ 13.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು ಃ- ರೇವಣ್ಣ ಬೋವಿ**

**ತಂದೆಯ ಹೆಸರು ಃ ಪಲ್ಲಯ್ಯ**

**ವಯಸ್ಸು - 25 ವರ್ಷ**

**ವೃತ್ತಿ ಃ- ಕೂಲಿಕೆಲಸ**

**ವಾಸಸ್ಥಳಃ- ಸಿಂಧನೂರು**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

**ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಭಿಸಲಾಯಿತು.**

ಸಾಕ್ಷಿಗೆ ಒಂದು ಸ್ಥಳ ಪಂಚನಾಮೆ ಮತ್ತು ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಿ 09-07-22 ರ ಕಾಣೆಯಾದ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು

ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಅಂದಾಜು 3 ವರ್ಷಗಳ ಹಿಂದೆ ಮೃತ ದೊಡ್ಡಲಿಂಗಪ್ಪ ಇವರು ವಾಸವಿದ್ದ ಮನೆಯ ಹತ್ತಿರ ಪೊಲೀಸರು ಬಂದು ಮೃತ ದೊಡ್ಡಲಿಂಗಪ್ಪ ಕಾಣೆಯಾದ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸುಮಾರು 40 ದಿನಗಳ ನಂತರ ಪೊಲೀಸರು ನನ್ನನ್ನು ಮೃತ ದೊಡ್ಡಲಿಂಗಪ್ಪ ನ ಶವ ಬಿದ್ದ ಸ್ಥಳದಲ್ಲಿ ಶವಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಶವಪಂಚನಾಮೆಯ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು , ಶವಪಂಚನಾಮೆಯನ್ನು ಈಗಾಗಲೇ ನಿಪಿ-13 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಮೃತ ದೊಡ್ಡಲಿಂಗಪ್ಪ ರಾಯಚೂರು ವಾಸಿ .

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಸಿ.ಡಿ.ಸಿ. / NRK ವಕೀಲರಿಂದ**

**2)** ಮೃತನ ಮನೆಯ ಬಳಿ ನಿರ್ವಹಿಸಿದ ಮಹಜರ್ ಗೆ ಯಾರು ಯಾರು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ಮಹಜರ್ ನ್ನು ಯಾರು ಬರೆದರು ಎಂದು ಈಗ ಹೇಳಲು ಆಗುವುದಿಲ್ಲ. ತಾವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ, ತಾವು ಪೊಲೀಸ್ ಠಾಣೆಗೆ ಹೋದಾಗ

ಪೊಲೀಸರು ಸಹಿ ಹಾಕು ಎಂದು ಹೇಳಿದ್ದಕ್ಕೆ ಸಹಿ ಹಾಕಿದ್ದೀರಿ ಅಂದರೆ ಸರಿಯಲ್ಲ.

3) ಮೃತದೇಹದ ಪಂಚನಾಮೆಯನ್ನು ಮಾಡಿದ ಕಾಲಕ್ಕೆ ಯಾರು ಯಾರು ಎಷ್ಟು ಜನರು ಸೇರಿದ್ದರು ಎಂದು ಹೇಳಲು ಬರುವುದಿಲ್ಲ. ಶವಪಂಚನಾಮೆಯನ್ನು ಯಾರು ಬರೆದರು ಎಂದು ಹೇಳಲು ಆಗುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಶವಪಂಚನಾಮೆಗೂ ಸಹ ತಾವು ಠಾಣೆಯಲ್ಲಿಯೇ ಸಹಿ ಮಾಡಿದ್ದೀರಿ ಅಂದರೆ ಸರಿಯಲ್ಲ. ಮೃತನ ಹೆಂಡತಿಯಾದ ಯಲ್ಲಮ್ಮ ನನ್ನ ಅತ್ತಿಗೆ . ಆ ಕಾರಣಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ . ತಾವು ಯಾವುದೇ ಮಹಜರ್ ಗೆ ಹೋಗಿರುವುದಿಲ್ಲ ಮತ್ತು ಅದಕ್ಕೆ ಸಹಿ ಹಾಕಿರುವುದಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.